**ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಶಶೀಲ್ ಜಿ ನಮೋಶಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು ಉತ್ತರ**

**ವಿಷಯ:-**

ರಾಜ್ಯದ ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕ ಸ್ಥಿರತೆಯನ್ನು ಬೆಳೆಸಲು ಶಾಲಾ ಹಂತದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುವವರು ದೈಹಿಕ ಶಿಕ್ಷಣ ಶಿಕ್ಷಕರು. ದೈಹಿಕ ಶಿಕ್ಷಣದ ಕೊರತೆಯಿಂದಾಗಿಯೇ ಇಂದು ನಮ್ಮ ರಾಜ್ಯದ ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕ ಸ್ಥೈರ್ಯ ಕುಂದುತ್ತಾ ಜೀವನದ ಬಗ್ಗೆ ಅರಿವಿಲ್ಲದೆಯೇ, ನಿರ್ದಿಷ್ಟ ಗುರಿ ಸಾಧಿಸಲಾಗದೆ ಹಲವಾರು ದುಶ್ಚಟಗಳಿಗೆ ಒಳಗಾಗುತ್ತಿದ್ದಾರೆ. ಇಂದಿನ ಮಕ್ಕಳನ್ನು ಎಲ್ಲಾ ಆಯಾಮಗಳಲ್ಲಿ ಸದೃಢರನ್ನಾಗಿ ಮಾಡಬೇಕಾದ ದೈಹಿಕ ಶಿಕ್ಷಕರ ಕೊರತೆ ದಶಕಗಳಿಂದ ರಾಜ್ಯದ ಸಾವಿರಾರು ಶಾಲೆಗಳಲ್ಲಿ ಕಾಣುತ್ತಿದೆ. ಇನ್ನೊಂದೆಡೆ ದೈಹಿಕ ಶಿಕ್ಷಣ ವಿಭಾಗದಲ್ಲಿ ವೃತ್ತಿ ಪರ ಕೋರ್ಸ್‌ಗಳನ್ನು ಮುಗಿಸಿಕೊಂಡು ಸಾವಿರಾರು ದೈಹಿಕ ಶಿಕ್ಷಣ ಉದ್ಯೋಗಾಕಾಂಕ್ಷಿಗಳು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದು, ನೇಮಕಾತಿಗಳೇ ಇಲ್ಲದೆ ಕುಟುಂಬ ನಿರ್ವಹಣೆ ಮಾಡಲು ಸಾಧ್ಯವಾಗದೆ ಜೀವನದ ಬಗ್ಗೆ ಜಿಗುಪ್ಸೆಯಲ್ಲಿ ಮುಳುಗಿದ್ದಾರೆ.

ಸರ್ಕಾರವು ರಾಜ್ಯದಲ್ಲಿ ಕಳೆದ 19 ವರ್ಷಗಳಿಂದ ಪ್ರಾಥಮಿಕ ಹಾಗೂ 10 ವರ್ಷಗಳಿಂದ ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳ ನೇಮಕಾತಿಯೇ ಮಾಡಿಲ್ಲ ಹಾಗೂ ಸರ್ಕಾರಿ ಶಾಲೆಗಳಲ್ಲಿ 6-10 ನೇ ತರಗತಿಗೆ ಪ್ರತಿ ವರ್ಷ ದೈಹಿಕ ಶಿಕ್ಷಣ ಪಠ್ಯಪುಸ್ತಕ ಒದಗಿಸುತ್ತಿದ್ದು, ಅದನ್ನು ಭೋಧಿಸಲು ಸರ್ಕಾರಿ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರೇ ಇಲ್ಲದಂತಾಗಿದೆ. ದೈಹಿಕ ಶಿಕ್ಷಕರು ಇಲ್ಲದಿರುವುದರಿಂದ ಮಕ್ಕಳು ಕ್ರೀಡೆಯಿಂದ ವಂಚಿತರಾಗುತ್ತಿದ್ದಾರೆ ಹಾಗೂ ಮಕ್ಕಳು ಮಾನಸಿಕವಾಗಿ, ದೈಹಿಕವಾಗಿ, ಖಿನ್ನತೆಗೊಳಗಾಗಿ ಹೃದಯ ಸಂಬಂಧಿ ಖಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇದನ್ನರಿತ ನಿರುದ್ಯೋಗಿ ದೈಹಿಕ ಶಿಕ್ಷಣ ಶಿಕ್ಷಕರು ಸುಮಾರು ಬಾರಿ ಹೋರಾಟ ಮಾಡಿದ್ದರೂ ಕೂಡ ಉದ್ಯೋಗಾಕಾಂಕ್ಷಿಗಳಿಗೆ ಕೇವಲ ಭರವಸೆ ಸಿಕ್ಕಿತೇ ಹೊರತು ಉದ್ಯೋಗ ಸಿಗಲಿಲ್ಲ.

ಈ ಹಿಂದೆ 2018-19 ಮತ್ತು 2021-22 ರಲ್ಲಿ ಸಹ-ಶಿಕ್ಷಕರನ್ನು ಸರ್ಕಾರ ನೇಮಕಾತಿ ಮಾಡಿಕೊಂಡಿದೆ. ಈ ನೇಮಕಾತಿಯಲ್ಲಿಯೂ ಕೂಡ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿ ಮಾಡದೇ ಸರ್ಕಾರ ಮಲತಾಯಿ ಧೋರಣೆ ತೋರಿದೆ. ಸಮಗ್ರ ಕರ್ನಾಟಕ ನೇಮಕಾತಿಯಲ್ಲಿ ಪತ್ರ ಸಂಖ್ಯೆ: 1414474 ಮತ್ತು 1416845 ರಲ್ಲಿ ಒಟ್ಟು ಪ್ರಾಥಮಿಕ ಶಾಲೆಗಳಿಗೆ-703 (Non KK) ಮತ್ತು 380 (ಕಲ್ಯಾಣ-ಕರ್ನಾಟಕ)ಕ್ಕೆ ಹಾಗೂ ಪ್ರೌಢ ಶಾಲೆಗಳಿಗೆ- 670 (Non KK) ಮತ್ತು 216 (ಕಲ್ಯಾಣ-ಕರ್ನಾಟಕ)ಕ್ಕೆ ಹುದ್ದೆಗಳ

ಭರ್ತಿಗೆ ಸರ್ಕಾರ ಮುಂದಾಗಿದ್ದು, ಈ ಹುದ್ದೆಗಳನ್ನು ಹೆಚ್ಚಿಸಿ, ಕಲ್ಯಾಣ-ಕರ್ನಾಟಕ ಹಾಗೂ ಸಮಗ್ರ ಕರ್ನಾಟಕದಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕಡಿತಗೊಳಿಸದೇ ಹುದ್ದೆಗಳನ್ನು ಹೆಚ್ಚಿಸಿ ರಾಜ್ಯದ ಮಕ್ಕಳ ಹಾಗೂ ನಿರುದ್ಯೋಗಿ ಉದ್ಯೋಗಾಕಾಂಕ್ಷಿಗಳ ಹಿತದೃಷ್ಟಿಯಿಂದ ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

## ಉತ್ತರ

**ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿ ಕುರಿತು.**

2025-26 ನೇ ಸಾಲಿನಲ್ಲಿ ಆಯವ್ಯಯ ಘೋಷಣೆಯಲ್ಲಿ "ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ 5,267 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಮುಂದುವರೆದು, ಇಲಾಖೆಯಲ್ಲಿ ಇನ್ನೂ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತರ್ಕಬದ್ಧಗೊಳಿಸಿ 5,000 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು." ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯ ಕಂಡಿಕೆ 119 ರಲ್ಲಿ ಘೋಷಿಸಿರುತ್ತಾರೆ. ಅದರಂತೆ ರಾಜ್ಯದ ಕಲ್ಯಾಣ ಕರ್ನಾಟಕ ಭಾಗದ ಹಾಗೂ ಕಲ್ಯಾಣ ಕರ್ನಾಟಕ ಭಾಗವನ್ನು ಹೊರತುಪಡಿಸಿ ಉಳಿದಂತೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಆದ್ಯತೆಯ ಮೇರೆಗೆ ನಿಯಮಾನುಸಾರ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಲು ಪ್ರಕ್ರಿಯ ಜಾರಿಯಲ್ಲಿರುತ್ತದೆ.

ಸಂಖ್ಯೆ: ಇಪಿ 404 ಎಸ್‌ಇಎಸ್ 2025

(ಎಸ್ ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖಾ ಸಚಿವರು